ಳ ಬಂಟ್ವಾಳ ತಾಲ್ಲೂಕಿನ ಬಿ.ಸಿ. ರೋಡಿನಿಂದ ಸುಖಾಸೀನ ಬಸ್ಸುಗಳ ಪ್ರಾರಂಭ

ಶ್ರೀ ರಮಾನಾಥರೈ.—ಮಾನ್ಯ ಅಧ್ಯಕ್ಷರೇ ಬಂಟ್ವಾಳ ತಾಲ್ಲೂಕಿನ ಕೇಂದ್ರ ಸ್ಥಳವಾದ ಬಿ. ಸಿ. ರೋಡ್ ಎಂಬಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸು ತಂಗುದಾಣವಿದ್ದು ಹಲವಾರು ಪ್ರದೇಶಗಳ ಕೇಂದ್ರ ಸ್ಥಾನವಾಗಿದೆ, ಸುತ್ತಮುತ್ತಲಿನ ಪ್ರದೇಶಗಳ ಜನ ಪ್ರತಿ ನಿತ್ಯ ಬಿ. ಸಿ. ರಸ್ತೆ ಕಡೆಯಿಂದ ಬೆಂಗಳೂರಿಗೆ ಪ್ರಯಾಣಿಸುವವರು ಪ್ರಯಾಸಪಟ್ಟು ಪಡಬಾಡಬೇಕಾಗಿದೆ. ಬಹಳ ಸಮಯದಿಂದ ಬಿ. ಸಿ. ರೋಡ್‌ನಿಂದ ಬೆಂಗಳೂರಿಗೆ ಸುಖಾಸನ ಬಸ್ಸಿನ ಬೇಡಿಕೆ ಇದ್ದು ಇನ್ನೂ ಪ್ರಾರಂಭಗೊಳಿಸದಿರುವುದು ದುರಾದೃಷ್ಟಕರ ಮಂಗಳೂರು ಬೆಂಗಳೂರು ಬಸ್ಸುಗಳಲ್ಲಿ ಬಿ ಸಿ ರೋಡು ಎಂಬಲ್ಲಿಂದಲೇ ಹಾದು ಹೋಗುವುದರಿಂದ ವಿನಾ ಕಾರಣ ಬಿ. ಸಿ. ರೋಡ್‌ನಿಂದ ಮಂಗಳೂರಿಗೆ ಪ್ರಯಾಣಿಸಿ ಕಷ್ಟಪಡಬೇಕಾದಂತಹ ಪ್ರಮೇಯ ಇರುವುದರಿಂದ ಅಗತ್ಯವಾಗಿ ಒಂದು ಸುಖಾಸೀನ ಬಸ್ಸನ್ನು ಬಿ. ಸಿ. ರೋಡ್‌ನಿಂದ ಬೆಂಗಳೂರಿಗೆ ಪ್ರಾರಂಭಿಸಿ ನಿತ್ಯ ಪ್ರಯಾಣಿಕರಿಗೆ ಸೌಲಭ್ಯ ಕಲ್ಪಿಸಿಕೊಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

MR. SPEAKER.—Will somebody from the Government take notice of it?

SRI K. H. RANGANATH. —I shall take notice of it and convey to the Minister concerned.

ಕಿ ತುರುವೇಕೆರೆಗೆ ಬರುತ್ತಿದ್ದ ಬಸ್ಸುಗಳನ್ನು ರದ್ದುಪಡಿಸಿರುವುದು.

ಶ್ರೀ ಎಸ್. ರುದ್ರಪ್ಪ.—ಮಾನ್ಯ ಅಧ್ಯಕ್ಷರೇ ತುಮಕೂರಿನಿಂದ ತುರುವೇಕೆರೆಗೆ ಬರುತ್ತಿದ್ದ ಈ ಕೆಳಕಂಡ ರೂಟ್ ಬಸ್ಸ್‌ಗಳ ಓಡಾಟವನ್ನು ರದ್ದುಪಡಿಸಿರುತ್ತಾರೆ. ರೋಟ್ ನಂಬರು ೧೭ಬಿ ೩೫ಎ ೭೫ ೩೫ಬಿ ೧೭ಎ ೧೬ ೩೫ಸಿ ೧೨ ೯೯ ೧೭ಸಿ ೩೫ ೨೪ ೨೪ ೧೪ ೪೪ ತುಮಕೂರಿನಿಂದ ತುರುವೇಕೆರೆ ಮಾರ್ಗವಾಗಿ ಸಂಚನಹಳ್ಳಿಗೆ ಬರುತ್ತಿದ್ದ ಬಸ್ ಓಡಾಟವನ್ನು ಸಹ ರದ್ದುಪಡಿಸಿರುತ್ತಾರೆ. ಕಣಿಗಲ್ ಡಿಪೋದಿಂದ ತುರುವೇಕೆರೆಗೆ ಬರುತ್ತಿದ್ದ ಕೆಳಕಂಡ ರೂಟ್ ನಂಬರ್ ಬಸ್ಸುಗಳು ಸರಿಯಾಗಿ ಬರುತ್ತಿಲ್ಲ ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ನೀಡುವರೇ?

SRI K. H. RANGANATH.—I shall convey the feelings of Hon. Member to the Minister concerned.

೫. ೦೦ ಪಿ.ಎಂ.

೬. ಹೊಳಲ್ಕೆರೆ ತಾಲ್ಲೂಕು ಮದ್ದೇರು ಗ್ರಾಮದಲ್ಲಿ ಕೆಂಚದ್ಯಾಮಪ್ಪನವರ ಕೊಲೆ.

ಶ್ರೀ ಎ ಎಸ್. ಉಮಾಪತಿ.—ಮಾನ್ಯ ಅಧ್ಯಕ್ಷರೇ, ಹೊಳಲ್ಕೆರೆ ತಾಲ್ಲೂಕು ಮದ್ದೇರು ಗ್ರಾಮದಲ್ಲಿ ಇತ್ತೀಚೆಗೆ ನಡದ ಕೆಂಚದ್ಯಾಮಪ್ಪ ಅವರ ಕೊಲೆಯ ಪ್ರಕರಣದಲ್ಲಿ ಶಾಮೀಲಾಗಿದ್ದು ಕೊಲೆ ಪ್ರಕರಣವನ್ನು ಮುಚ್ಚಿ ಹಾಕಿದ್ದ ಅಂದಿನ ಚಿತ್ರದುರ್ಗ ಸರ್ಕಲ್ ಇನ್ಸ್‌ಪೆಕ್ಟರ್ ಅವರ ಮೇಲೆ ಯಾವ ಕ್ರಮವನ್ನು ಜರುಗಿಸಿದ್ದೀರಾ? ಎಂಬುದರ ಬಗ್ಗೆ ಸರ್ಕಾರದ ಉತ್ತರ ತಿಳಿಯಬಯಸುತ್ತೇನೆ. ಸದರಿ ಕೇಸಿಗೆ ಸಂಬಂಧಿಸಿದಂತೆ ಸ್ಥಳೀಯ ಪೋಲೀಸಿನವರಿಂದ ಯಾವುದೇ ನ್ಯಾಯ ದೊರಕದೆ ಇದ್ದುದರಿಂದ ಸಾರ್ವಜನಿಕರು ಪೋಲೀಸ್ ಮಹಾನಿರ್ದೇಶಕರನ್ನು ಭೇಟಿ ಮಾಡಿ ಈ ವಿಚಾರ ತಿಳಿಸಿದ ಮೇಲೆ ಪೋಲೀಸ್ ಮಹಾ ನಿರ್ದೇಶಕರು ತಕ್ಷಣ ಈ ಕೇಸನ್ನು ಸಿ.ಓ.ಡಿ.ಗೆ ವಹಿಸಿದ ಮೇಲೆ, ಸಿ.ಓ.ಡಿ. ಯವರು ವಿಚಾರಣೆ ನಡೆಸಿ ಅಪರಾಧಿಗಳನ್ನು ಪತ್ತೆ ಮಾಡಿ ಅವರನ್ನು ಜ್ಯುಡಿಷಿಯಲ್ ಕಸ್ಟಡಿಗೆ ಕಳುಹಿಸಿದ್ದಾರೆ. ಆದರೆ ಈವರೆವಿಗೂ ಯಾವುದೇ ಕ್ರಮ ಸದರಿ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಮೇಲೆ ಜರುಗಿಸಿರುವುದಿಲ್ಲ. ಹಾಗೂ ಅವರೂ ಸಹಾ ಈ ಕೇಸಿನಲ್ಲಿ ಅಪರಾಧಿಯಾಗುವ ಸಂಭವ ಇದ್ದಾಗ್ಯೂ ಅವರನ್ನು ಅಧಿಕಾರದಲ್ಲಿ ಮುಂದುವರಿಸಿದರೆ ಅಧಿಕಾರ ದುರುಪಯೋಗವಾಗಬಹುದು. ಈಗ ಅವರು ಕರ್ನಾಟಕ ಹೈಕೋರ್ಟ್‌ನಲ್ಲಿ ನಿರೀಕ್ಷಣಾ ಜಾಮೀನು ಸಹಾ ಪಡೆದಿರುವುದರಿಂದ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರಾರವರು ತಮ್ಮ ತಪ್ಪನ್ನು ಒಪ್ಪಿಕೊಂಡಂತಾಗಿದೆ. ಹೀಗಿದ್ದಾಗ್ಯೂ ಅವರ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಆದ್ದರಿಂದ ಸರ್ಕಾರದವರು ಕೂಡಲೇ ಅವರ ಮೇಲೆ ಸೂಕ್ತ ಕ್ರಮಕ್ಕೆಗೊಳಕ ಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.